


ಎಡದಿಂದ ಬಲಕ್ಕೆ:

1. ಲಾಭವನ್ನ ಹೆಚ್ಚಿಸಿಕೊಡುವ ಆಮಿಷ ತೋರಿದರೇ? (4)
3. ಮುರುಳಿಯ ನಾದಕ್ಕೆ ಮನಸೋತು ಹುಚ್ಚನಾದ (3)
4. ಕುರುಹು ಕೇಳಿದ್ದಕ್ಕೇ ವ್ಯಂಗ್ಯ ಮಾಡುವುದೇ? (3)
6. ಪುತ್ಥಳಿಯ ಸ್ಥಾಪನೆ ಶ್ರಮಪಟ್ಟಿದ್ದರ ಪರಿಣಾಮ (4)
7. ಕೆತ್ತನೆಯ ನಡು ನಡುವೆ ಕುದುರೆಯ ಕೂಗು ಕೇಳಿಸಿತು (3)
9. ಸೋಲಿಗೆ ಕಾರಣವಾದದ್ದು ಅತಿ ಸ್ನೇಹ (3)
11. ಕಲ್ಲು ಹಾಕುವ ಮೊದಲು ಚೆನ್ನಾಗಿ ಬೆರೆಸು (3)
13. ಸುತ್ತಮುತ್ತ ಎಲ್ಲರದೂ ಒಳ್ಳೆಯದೇ ಬುದ್ಧಿ (3)
15. ಹದ್ದುಗಳಿಗೆ ಕಾಣದಂತಾಗಿಸು–ಮುಚ್ಚಿಡು (4)
17. ಗಟಾರಕ್ಕೆ ಬಿತ್ತು, ನೋಡಿ, ಗಂಡು ಕುರಿ (3)
18. ಮೂಕರನ್ನಾಗಿಸಿತು, ಭಾರೀ ಮೊಸಳೆ (3)
19. ಪುರಾಣ ಕಥನ ಬಹಳ ಪ್ರಾಚೀನ (4)

ಮೇಲಿಂದ ಕೆಳಕ್ಕೆ:

1. ಪೊಳ್ಳಾಯಿತು ಭಯ, ಮಹಾಲಯವೇ? (3)
2. ಒಮ್ಮೆಯೂ ನಕ್ಕಿಲ್ಲ ಬಿಡಿ, ನಾಲ್ಕನೇ ಪಾಂಡವ (3)
3. ಮೂರು ದಿನ ನಿಂತಿತ್ತು, ಮದವೇರಿದ ಆನೆ (3)
5. ಕಲ್ಲು ತರುವಾಗ ಕಿಂಚಿತ್ತೂ ಬೆಳಕಿರಲಿಲ್ಲ (3)
7. ಕಂಡವರಿಗೆಲ್ಲ ಕೇಡೆಣಿಸುವ ಕೆಟ್ಟ ಮನುಷ್ಯ (3)
8. ತಾಳಕ್ಕೂ ರಾಗಕ್ಕೂ ಬಿಡದ ಬೆಸುಗೆ (3)
9. ಸಾಲ ಕೊಡಿಸುವುದು ಸ್ವಲ್ಪವೂ ಕಷ್ಟ ಇಲ್ಲ (3)
10. ತಿಂಗಳಾಯಿತು ಮತ್ತೆ ಕಾಣಲಿಲ್ಲ ಸ್ನೇಹಿತೆ (3)
12. ಕೋಲಾಟದಲ್ಲಿ ಲಟ ಲಟ ಏಟು ಹಣೆಗೆ (3)
14. ಮುತ್ತಿನ ಸರ ತೊಟ್ಟವರನ್ನು ಕಂಡು ಹೊಟ್ಟೆಕಿಚ್ಚು (3)
15. ಪಹರೆ ಕಾರ್ಯದಲ್ಲಿ ಆತನಿಗೆ ಭಾರೀ ಉತ್ಸಾಹ (3)
16. ಮನಸನ್ನು ಅರಳಿಸುವ ಸುಂದರ ಕುಸುಮ (3)

## ಪದಬಂಧ 20-10-2011ರ ಉತ್ತರಗಳು

ಎಡದಿಂದ ಬಲಕ್ಕೆ:
1. ಪ್ರಸಾದನ; 3. ಮಾರಣ; 4. ಗಡವ; 6. ವನಚರ;
7. ಕವನ; 9. ಕನಸು; 11. ತಬಲ; 13. ತಿಲಕ;
15. ಕಾರಾಗೃಹ; 17. ದುಮ್ಮಾನ; 18. ವರಾತ; 19. ಕಳವಳ.

ಮೇಲಿಂದ ಕೆಳಕ್ಕೆ:
1. ಪ್ರಣವ; 2. ನಗರಿ; 3. ಮಾರ್ದವ; 5. ವಸನ;
7. ಕರಗತ; 8. ನವಕಾಲ; 9. ಕರಾಮತಿ; 10. ಸುಧಾರಕ;
12. ಬರದು; 14. ಲಲಿತ; 15. ಕಾನಕ; 16. ಹವಳ.

# ಜೀವಿ ವಿಸ್ಮಯ

## ಇರುವೆ ಬೆನ್ನಲ್ಲಿ ಗಿಡ ಹೇಗೆ?

ಇರುವೆಯೊಂದರ ಬೆನ್ನಲ್ಲಿ ಎದ್ದಿರುವ ಜೋಡಿ ಗಿಡ ವಾಸ್ತವವಾಗಿ ಅದು ಗಿಡ ಅಲ್ಲ. ಗಿಡದಂತೆ ಕಾಣುವ ಒಂದು ಕ್ರೂರ–ಕೊಲೆಗಾರ. ಸಮಭಾಜಕದ ಆಸುಪಾಸಿನ ವೃಷ್ಟಿವನ ಪ್ರದೇಶಗಳಲ್ಲಿ ಇಂಥ ಭಯಂಕರ ದೃಶ್ಯ ಸದಾ ಸಾಮಾನ್ಯ.

ಹೀಗೆ ಇರುವೆಯೊಂದನ್ನು ಬಲಿ ಪಡೆದಿರುವ ಬೇಟೆಗಾರ– ಅದೊಂದು ವಿಸ್ಮಯದ ಜೀವಿ. ಅದು ಸಸ್ಯ ವರ್ಗಕ್ಕೆ ಸೇರುವುದಿಲ್ಲ. ಏಕೆಂದರೆ ಅದಕ್ಕೆ 'ದ್ಯುತಿ ಸಂಶ್ಲೇಷಣಾ ಸಾಮರ್ಥ್ಯ' ಇಲ್ಲ. ಹಾಗೆಂದು ಅದು ಪ್ರಾಣಿವರ್ಗಕ್ಕೂ ಸೇರುವುದಿಲ್ಲ. ಏಕೆಂದರೆ ಅದಕ್ಕೆ ಚಲನಶೀಲತೆ ಇಲ್ಲ, ನರಮಂಡಲ ಇಲ್ಲ. ಸಸ್ಯವು ಅಲ್ಲದ ಪ್ರಾಣಿಯೂ ಅಲ್ಲದ ಈ ಜೀವಿ 'ಶಿಲೀಂಧ್ರ' ವರ್ಗಕ್ಕೆ ಸೇರಿದೆ. ಬೂಷ್ಟು, ಹುದುಗು, ಹುಳುಕು, ಎರ್ಗಾಟ್, ಪಫ್‌ಬಾಲ್, ರಸ್ಟ್, ರಟ್, ಬ್ಲೈಟ್, ಅಣಬೆ ಇತ್ಯಾದಿಗಳನ್ನೆಲ್ಲ ಒಳಗೊಂಡಿರುವ ಶಿಲೀಂಧ್ರ ವರ್ಗದಲ್ಲಿ ಎಪ್ಪತ್ತೈದು ಸಾವಿರ ಪ್ರಭೇದಗಳನ್ನು ಗುರುತಿಸಲಾಗಿದೆ. ಇನ್ನೂ ಅಜ್ಞಾತ ಪ್ರಭೇದಗಳು ಹದಿನಾಲ್ಕು ಲಕ್ಷ ಇರಬಹುದು!

ಆಶ್ಚರ್ಯ ಏನೆಂದರೆ ಈ ವರ್ಗದ ಸಾವಿರಾರು ಪ್ರಭೇದಗಳು ಸಸ್ಯಗಳಿಗೆ–



ಪ್ರಾಣಿಗಳಿಗೆ ಗಂಭೀರ ರೋಗಗಳನ್ನು ಹಬ್ಬುತ್ತವಾದರೆ ಮತ್ತೆ ಕೆಲ ಸಾವಿರಾರು ಪ್ರಭೇದಗಳು ಘೋರ ಜಾಡ್ಯಗಳಿಗೆ ಔಷಧ ಒದಗಿಸುತ್ತವೆ. ಹಲವಾರು ಸಾವಿರ ಪ್ರಭೇದಗಳು ಪ್ರಾಣಿ–ಸಸ್ಯಗಳನ್ನು ಪೋಷಿಸಿದರೆ ಇತರ ಸಾವಿರಾರು ಪ್ರಭೇದಗಳು ಮೃತ ಜೀವಿಗಳನ್ನೂ, ಕಸದ ರಾಶಿಗಳನ್ನು ಕೊಳೆಯಿಸಿ ಗೊಬ್ಬರವನ್ನಾಗಿಸುತ್ತವೆ. ಇನ್ನೂ ಹಲವು ಪ್ರಭೇದಗಳು ಜೀವಂತ ಸಸ್ಯಗಳ– ಪ್ರಾಣಿಗಳ ಮೇಲೆ ದಾಳಿ ಮಾಡಿ, ಘೋರ ಸಾವು ತರುತ್ತವೆ. ಅಂತಹ ಒಂದು ಪ್ರಭೇದದ ಭೀಕರ ಬೇಟೆಯ ಪರಿಣಾಮವೇ ಈ ದೃಶ್ಯ (ಚಿತ್ರ ನೋಡಿ).

'ಕಾರ್ಡಿಸೆಪ್ಸ್ ಲ್ಲಾಯ್ಡಿ' ಪ್ರಭೇದದ ಶಿಲೀಂಧ್ರದ 'ಬೀಜಕಣ'ವೊಂದು ಗಾಳಿಯಲ್ಲಿ ತೇಲುತ್ತ ಬಂದು ಈ ಇರುವೆಯ ಮೇಲಿಳಿದಿತ್ತು. ದೃಗೋಚರವೇ ಅಲ್ಲದಷ್ಟು ಸೂಕ್ಷ್ಮಗಾತ್ರದ ಆ ಬೀಜಕಣ ನಿಧಾನವಾಗಿ ಈ ದುರ್ಭಾಗ್ಯದ ಇರುವೆಯ ದೇಹದೊಳಕ್ಕಿಳಿದು, 'ರಕ್ತಪ್ರವಾಹ'ದಲ್ಲಿ ಸೇರಿ ಬೇಗ ಬೇಗ ವರ್ಧಿಸಿತ್ತು. ಹಾಗಾದೊಡನೆ ಇರುವೆಯ ಶರೀರದೊಳಗಿನ ಅಂಗಾಂಗಗಳನ್ನೆಲ್ಲ ತಿಂದು ತಿಂದು ಇರುವೆಗೆ ದುರ್ಭರ ಮರಣ ತಂದಿತ್ತು.

ಆ ವೇಳೆಗೆ ಇರುವೆ ಶರೀರದ ಗಟ್ಟಿ ಹೊರ ಕವಚವಷ್ಟೇ ಉಳಿದಿತ್ತು. ಹತ್ತಿಯ ಎಳೆಗಳಂತೆ ಹರಡಿ ಈ ಬಾಹ್ಯ ಕವಚವನ್ನೂ ಆವರಿಸಿದ ಶಿಲೀಂಧ್ರ ಅಂತಿಮವಾಗಿ ಗಿಡ ಮೊಳಕೆಗಳಂತೆ ಕಾಣುವ 'ಬೀಜ ಕಣ ಕೋಶ'ಗಳನ್ನು ಅರಳಿಸಿತ್ತು. 'ಇರುವೆ ಬೆನ್ನಲ್ಲಿ ನಿಂತಿರುವ ಗಿಡಗಳು' ಇವೇ. ಮಳೆ ಹನಿಗಳು ಬಿದ್ದೊಡನೆ ಹೊರಕ್ಕೆ ಹಾರಿ ಚದರಿ ಗಾಳಿಯಲ್ಲಿ ತೇಲಿ ಸಾಗುವ ಬೀಜಕಣಗಳು ಇದೇ ಚಕ್ರ ಅನುಸರಿಸುತ್ತವೆ. ಎಂಥ ಕ್ರಮ!

■ ಎನ್. ವಾಸುದೇವ್